# ಮೊದಲ ಸಂಕಲನಾತ್ಮಕ ಮೌಲ್ಯಮಾಪನ ಸೆಪ್ಟಂಬರ್ – 2018–19

## 9ನೇ ತರಗತಿ ಪ್ರಥಮ ಭಾಷೆ ಕನ್ನಡ

**ಸಮಯ: 1ಗಂಟೆ 30 ನಿಮಿಷ** **ಅಂಕಗಳು : 40**

ಸೂಚನೆ: * ಪ್ರತಿ ಪ್ರಶ್ನೆಗಳನ್ನು ಸರಿಯಾಗಿ ಓದಿಕೊಂಡು ಸೂಕ್ತ ಉತ್ತರಗಳನ್ನು ಬರೆಯಿರಿ
* ಉತ್ತರಗಳನ್ನು ಅಂದವಾಗಿ ಮತ್ತು ಸರಿಯಾಗಿ ಬರೆಯಿರಿ

### ಭಾಗ – ಎ (ಗದ್ಯ, ಪದ್ಯ ಮತ್ತು ಪೂರಕ ಪಾಠಗಳು – 28 ಅಂಕಗಳು)

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ** **1X5=05**

1. ಮೌಲ್ವಿ ಹಿಡಿದಿದ್ದ ಕನ್ನಡದ ಪುಸ್ತಕ ಯಾವುದು?
2. ಬುಕ್ಕರಾಯನ ಕಾಲದಲ್ಲಿ ಯಾರೊಳಗೆ ಸಂವಾದ ನಡೆಯಿತು?
3. ರಾಧಕೃಷ್ಣನ್ ಅವರ ತಂದೆಯ ಹೆಸರೇನು?
4. ಭರತನನ್ನು ಹೊಗಳುತ್ತಿದ್ದ ಮೂರು ಲೋಕಗಳು ಯಾವುವು?
5. ರಂಜಾನ್ ಹಬ್ಬದ ಸಡಗರವು ಯಾವಾಗ ಶುರುವಾಗುತ್ತದೆ?

**II. ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ** **2X3=06**

1. ಪಂಡರಿಬಾಯಿ ಅವರು ನಾಟಕದಲ್ಲಿ ಬಣ್ಣ ಹಚ್ಚಲು ಕಾರಣವೇನು?
2. ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಯಾರನ್ನೆಲ್ಲ ಆಹ್ವಾನಿಸಿದನು?
3. ಜಯಪುರದ ಪೂರ್ವದ ರಾಜಧಾನಿ ಯಾವುದು?

**III. ಸಂದರ್ಭಸಹಿತ ಸ್ವಾರಸ್ಯ ಬರೆಯಿರಿ** **3X3=09**

1. "ನೀವೊಬ್ಬರೆ ನನ್ನನ್ನು ಮನುಷ್ಯನಂತೆ ಕಂಡು ವರ್ತಿಸಿದವರು"
2. "ಅವರು ನಿಮ್ಮೆದುರಿಗೆ ಬಂದರೆ ಏನು ಮಾಡುತ್ತೀರಿ"
3. "ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ"

**IV. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿರಿ** **3X1=03**

ಜಾತಿ–ಕುಲ.................................... **ಅಥವಾ** ಅಯ್ಯಯ್ಯ.................
....................................ಗುಡುಗಬೇಕು ....................................ಕೇಳಬೇಕಣ್ಣ

**V. ಕೆಳಗಿನ ಲೇಖಕ/ಕವಿಗಳಲ್ಲಿ ಯಾರಾದರೊಬ್ಬರ ಪರಿಚಯ ಮಾಡಿಕೊಡಿರಿ.** **2X1=02**

1. ಜನ್ನ 2. ಶಿವರಾಮ ಕಾರಂತ

**VI. ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಎಂಟು – ಹತ್ತು ವಾಕ್ಯದಲ್ಲಿ ಉತ್ತರಿಸಿರಿ** **3X1=03**

1. 'ನಿಯತಿಯನಾರ್ ಮೀಱಿದಪರ್' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ
2. ನನ್ನಾಸೆ ಕವನದಲ್ಲಿ ಕವಯತ್ರಿಯರ ಆಸೆಗಳೇನು? ವಿವರಿಸಿರಿ

### ಭಾಗ – ಬಿ (ಅನ್ವಯಿಕ ವ್ಯಾಕರಣ – 09 ಅಂಕಗಳು)

**VII. ಕೊಟ್ಟಿರುವ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಇವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **1X4=04**

1. ಚಳಿಗಾಲ ಪದದಲ್ಲಿ ಉಂಟಾಗಿರುವ ಸಂಧಿ.
   ಅ. ಲೋಪಸಂಧಿ ಆ. ಗುಣಸಂಧಿ ಇ. ಆಗಮಸಂಧಿ ಈ. ಆದೇಶಸಂಧಿ
2. ಕ್ರಿಯಾಸಮಾಸಕ್ಕೆ ಸರಿಯಾದ ಉದಾಹರಣೆ
   ಅ. ಕೈಮುಗಿ ಆ. ಕೆಂದಾವರೆ ಇ. ಒಗ್ಗಟ್ಟು ಈ. ಚಕ್ರಪಾಣಿ
3. ಪುಸ್ತಕವನ್ನು ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ
   ಅ. ಪ್ರಥಮ ಆ. ದ್ವಿತೀಯಾ ಇ. ಸಪ್ತಮಿ ಈ. ಪಂಚಮಿ
4. ದಂತ್ಯಕ್ಷರಗಳೆಂದರೆ ಈ ಕೆಳಗಿನ ವರ್ಗದ ಅಕ್ಷರಗಳು
   ಅ. ಕ ವರ್ಗ ಆ. ತ ವರ್ಗ ಇ. ಪ ವರ್ಗ ಈ. ಚ ವರ್ಗ

**VIII. ಕೊಟ್ಟಿರುವ ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ ಮೂರನೆ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.** **1X2=02**

1. ಕಾವ್ಯ : ಕಬ್ಬ :: ಆರ್ಯ : .
2. ಅಂಬುಜ : ತಾವರೆ :: ನೃಪ :

**IX.ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಸಮನ್ವಯಗೊಳಿಸಿರಿ** **3X1=03**

1. ಮನೆಯೇ ಮಂತ್ರಾಲಯ **ಅಥವಾ** **2.** ತರಕ್ಷು ಪಿಡಿವಂತೆ ಚಂಡಕರ್ಮಂ ಪಿಡಿದಂ

### ಭಾಗ – ಸಿ (ವಾಕ್ಯರಚನೆ ಮತ್ತು ಬರವಣಿಗೆ ಕೌಶಲ್ಯ –03 ಅಂಕಗಳು)

**X. ಕೆಳಗಿನ ಯಾವುದಾದರೂ ಒಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ** **3X1=03**

1. ಇರುಳು ಕಂಡ ಬಾವಿಗೆ ಹಗಲು ಬಿದ್ದಂತೆ
2. ಕೈ ಕೆಸರಾದರೆ ಬಾಯಿ ಮೊಸರು